**ಓಎಸ್ ನಂ. 113-2011 ಃ ಡಿ.ಡಬ್ಲ್ಯೂ-1**

**ದಿನಾಂಕ: 06-03-2018 ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟಿ ಸವಾಲುಃ ವಾದಿ ಪರ ಶ್ರೀ ಎಂ.ಜೆ..ಎಸ್. ವಕೀಲರಿಂದ.**

ನಾನು ವ್ಯಾಪಾರಸ್ಥನಾಗಿರುತ್ತೇನೆ. ಕಳೆದ 37 ವರ್ಷಗಳಿಂದ ವ್ಯಾಪಾರ ಮಾಡುತ್ತೇನೆ. ನನಗೆ ಮಣಿಪಾಲದಲ್ಲಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಫ್ಯಾಕ್ಟ್ರಿ ಇದೆ. ಉಡುಪಿಯ ಕಡಿಯಾಳಿ ಯಲ್ಲಿ ನನ್ನ ಕಚೇರಿ ಇದೆ. ನಾನು ಎಸ್‌ಎಸ್‌ಎಲ್‌ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಕೋಟಾದ ವಿವೇಕಾ ಹೈಸ್ಕೂಲ್‌ನಲ್ಲಿ ಎಸ್‌ಎಸ್‌ಎಲ್‌ಸಿ ಮಾಡಿರುತ್ತೇನೆ.

ಈಗ್ಗೆ 20 ವರ್ಷಗಳ ಹಿಂದೆ ನಾನು ಉಡುಪಿ ನಗರದ ಅಂಬಲಪಾಡಿ ಎಂಬಲ್ಲಿ ವಾಸ್ತವ್ಯದ ಮನೆ ಹೊಂದಿದೆ. ನಾನು, ನನ್ನ ಹೆಂಡತಿ ಮಿಲ್‌ಡ್ರೆಡ್, ಮೂರು ಜನ ಮಕ್ಕಳು ವಾಸವಿದ್ದೆವು. ನನ್ನ ಮೊದಲ ಹೆಂಡತಿ ಮೃತಪಟ್ಟ ನಂತರ ಮೂಡುತೋನ್ಸೆ ಗ್ರಾಮದ ಕಲ್ಯಾಣಪುರದಲ್ಲಿ 2002 ರಲ್ಲಿ ಮನೆಯನ್ನು ನಿರ್ಮಿಸಿರುತ್ತೇನೆ. ಮೂಡುತೋನ್ಸೆ ಗ್ರಾಮದ ಮನೆಗೆ ಬರುವುದಕ್ಕಿಂತ ಮುಂಚೆ ಉಡುಪಿ ನಗರದ ವ್ಯಾಪ್ತಿಯಲ್ಲಿ ಮೂರು ಬಾಡಿಗೆ ಮನೆಗಳಲ್ಲಿ ವಾಸವಿದ್ದೆ. 2002 ರಿಂದ ವಾಸ್ತವ್ಯ ಇರುವ ಮನೆ ಮೂಡುತೋನ್ಸೆ ಗ್ರಾಮದ ಕಲ್ಯಾಣಪುರದ ಜಂಗಮರಬೆಟ್ಟು ಎಂಬಲ್ಲಿದೆ. ಈ ದಾವಾದ ಸಮನ್ಸ್ ದಾವಾ ಪತ್ರದಲ್ಲಿ ಕಾಣಿಸಿರುವ ನನ್ನ ವಿಳಾಸಕ್ಕೆ ಜಾರಿಯಾಗಿರುತ್ತದೆ. ನನ್ನ ಮತ್ತು ಮೊದಲ ಪತ್ನಿಯ ಮೂರು ಮಕ್ಕಳು ನನ್ನ ಈ ಮೇಲೆ ಹೇಳಿದ ಕಲ್ಯಾಣಪುರದ ಮನೆಯಲ್ಲಿ ವಾಸವಿದ್ದಾರೆ. ನನ್ನ ಮಕ್ಕಳಿಗೆ ದಾವೆಯ ವಿಚಾರವನ್ನು ತಿಳಿಸಿದ್ದೀರಾ ಎಂದರೆ ಸಾಕ್ಷಿ ಮಕ್ಕಳಿಗೆ ಮಾಹಿತಿ ಇದೆ ಎಂದು ನುಡಿಯುತ್ತಾರೆ. ಏಕೆಂದರೆ ದಾವಾ ನೋಟೀಸನ್ನು ಅವರು ಓದಿ ನೋಡಿರುತ್ತಾರೆ.

ದಾವಾ ಆಸ್ತಿಯಲ್ಲಿ ನಿರ್ಮಾಣವಾದ ಮನೆಯನ್ನು 1962 ರಲ್ಲಿ ಕಟ್ಟಲಾಗಿರುತ್ತದೆ. ದಾವಾ ದಾಖಲು ಮಾಡುವಾಗ ದಾವಾ ಆಸ್ತಿ ನನ್ನ ತಂದೆ ಮತ್ತು ತಾಯಿಯ ಜಂಟಿ ಹಕ್ಕಿನಲ್ಲಿತ್ತು ಸದ್ರಿ ಜಂಟಿ ಹಕ್ಕು ಭೂ ನ್ಯಾಯ ಮಂಡಳಿಯ ತೀರ್ಪಿನ ಪ್ರಕಾರ ಬಂದಿರುತ್ತದೆ. ನಾನು ಹೇಳುವ ಭೂ ನ್ಯಾಯ ಮಂಡಳಿಯ ತೀರ್ಪು ಅಂದರೆ ಅದು ನಿಡಿ.1 ಮತ್ತು ನಿಡಿ.3 ಆಗಿರುತ್ತದೆ. ನಿಡಿ.1 ಮತ್ತು ನಿಡಿ.3 ರ ಪ್ರಕಾರ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅಧಿಬೋಗದಾರಿಕೆ ಹಕ್ಕು ನನ್ನ ತಂದೆ ಮತ್ತು ತಾಯಿಯ ಜಂಟಿ ಹಕ್ಕಿಗೆ ತೀರ್ಪಾಗಿರುತ್ತದೆ. ಆ ತೀರ್ಪು ಅನ್ನು ಓದಿ ತಿಳಿದು ಮನವರಿಕೆ ಮಾಡಿಕೊಂಡಿದ್ದೇನೆ. ಆ ತೀರ್ಪು ಸರಿ ಇರುತ್ತದೆ. ಆ ತೀರ್ಪು ಸರಿ ಇಲ್ಲ ಎಂದು ಅದರ ವಿರುದ್ದ ಮೇಲ್ಮನವಿ ಸಲ್ಲಿಸಿರುದಿಃರಾ ಎಂದರೆ ಸಾಕ್ಷಿ ನಾವು ಸಲ್ಲಿಸಿರುವುದಿಲ್ಲ ನನ್ನ ತಂದೆ 1982 ರಲ್ಲಿ ಸದ್ರಿ ಆಸ್ತಿ ತನ್ನ ಮತ್ತು ತನ್ನ ಹೆಂಡತಿಯ ಜಂಟಿ ಹೆಸರಿಗೆ ಆಗಿರುವುದು ತಪ್ಪು ಎಂದೂ, ತನ್ನ ಒಬ್ಬನ ಹೆಸರಿಗೆ ಆಗಬೇಕೆಂದು ಮೇಲ್ಮನವಿ ಸಲ್ಲಿಸಿದ್ದಾರೆ. ಸದ್ರಿ ಮೇಲ್ಮನವಿಯನ್ನು ನನ್ನ ತಂದೆಯೇ ವಾಪಾಸ್ ಪಡೆದಿರುತ್ತಾರೆ. ನಿಡಿ.1 ರ ತೀರ್ಪನ್ನು ಆಧರಿಸಿ ನಿಡಿ.2 ರಂತೆ ಪಟ್ಟೆಯನ್ನು ನೀಡಿದ್ದಾರೆ ಅದು ನನ್ನ ಪ್ರಕಾರ ತಪ್ಪು. ಜಂಟಿ ಹೆಸರಿಗೆ ಆದೇಶ ನೀಡಿದ ಕಾರಣ ಪಟ್ಟೆ ಕೂಡ ಜಂಟಿ ಹೆಸರಿಗೆ ಆಗಬೇಕು, ಅದು ನನ್ನ ತಂದೆ ಹೆಸರಿನಲ್ಲಿ ಮಾತ್ರ ಇರುವುದು ತಪ್ಪಾಗಿರುತ್ತದೆ. ನಿಡಿ.2 ರ ದಾಖಲೆ ಪ್ರಕಾರ ಸದ್ರಿ ಆಸ್ತಿ ನನ್ನ ತಂದೆ ಒಬ್ಬರಿಗೆ ಮಂಜೂರಾಗಿರುವುದು ಕಂಡುಬರುತ್ತದೆ ಎಂದರೆ ಸರಿ. ನಿಡಿ.2 ರ ಪಟ್ಟೆ ವಿರ್ುದ್ದ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

ಸದ್ರಿ ಆಸ್ತಿಯ ಅಧಿಭೋಗದಾರಿಕೆ ಕೋರಿ ಫಾರಂ ನಂ.7 ನ್ನು ಭೂ ನ್ಯಾಯ ಮಂಡಳಿಯ ಮುಂದೆ ನನ್ನ ತಾಯಿ ಹಾಕಿರುತ್ತಾರೆ. ನನ್ನ ಪ್ರಕಾರ ಅರ್ಜಿಯನ್ನು ನನ್ನ ತಾಯಿಯೇ ನೀಡಿದ್ದು ಅದನ್ನು ನನ್ನ ತಂದೆಯ ಹೆಸರಿನಲ್ಲಿ ಸಲ್ಲಿಸಿದ್ದರು. ದಾವಾ ಆಸ್ತಿಗೆ

ಸಂಬಂದಘಟ್ಟಂತೆ ಫಾರಂ ನಂ.7 ನ್ನು ನನ್ನ ತಂದೆ ಹೆಸರಿಗೆ ಸಲ್ಲಿಸಲಾಗಿತ್ತು, ಭೂ ನ್ಯಾಯ ಮಂಡಳಿಯ ಮುಂದೆ ತನಿಖೆಗೆ ಬಂದಾಗ ನನ್ನ ತಾಯಿ ಭೂ ನ್ಯಾಯ ಮಡಂಳಿಯ ಮುಂದೆ ಹಾಜರಾಗಿ ತನಗೂ ಮತ್ತು ತನ್ನ ಗಂಡನ ನಡುವೆ ಸಂಬಂಧ ಒಳ್ಳೆಯದಲ್ಲ ನಾವು ಕಚ್ಚಾಡಿ ಕೊಳ್ಳುತ್ತಿದ್ದೇವೆ, ಆದ ಕಾರಣ ಆ ಆಸ್ತಿ ಗಂಡನ ಹೆಸರಿಗೆ ತೀರ್ಪು ಆದರೆ ನನ್ನನ್ನು ಬೀದಿ ಪಾಲು ಮಾಡುತ್ತಾರೆ. ಆದ್ದರಿಂದ ನನ್ನ ಹೆಸರಿಗೆ ಜಂಟಿಯಾಗಿ ತೀರ್ಪು ಮಾಡಿ ಎಂದ ಕಾರಣ ಸದ್ರಿ ಆಸ್ತಿ ನನ್ನ ತಂದೆ ಮತ್ತು ತಾಯಿಯ ಜಂಟಿ ಹೆಸರಿಗೆ ತೀರ್ಪು ಆಗಿರುತ್ತದೆ.

ನನ್ನ ತಂದೆ 1973 ರಲ್ಲಿ ದಾವಾ ಆಸ್ತಿಯಲ್ಲಿರುವ ಮನೆಯನ್ನು ಬಿಟ್ಟು ಹೋಗಿರುತ್ತಾರೆ. ಅವರು ತೆಕ್ಕಟ್ಟೆ ಎಂಬಲ್ಲಿ ಬ್ರಹ್ಮಸ್ಥಾನ ಎಂಬಲ್ಲಿರುವ ವಾಣಿಜ್ಯ ಸಂಕೀರ್ಣ ದಲ್ಲಿ ಸೈಕಲ್ ಅಂಗಡಿಯನ್ನು ನಡೆಸುತ್ತಿದ್ದರು. 1983-84 ರಲ್ಲಿ ನನ್ನ ತಂದೆ ಮತ್ತು ತಾಯಿ ಒಟ್ಟಾಗಿರುತ್ತಾರೆ. ನಂತರ ನಮ್ಮ ತಂದೆ ನಮ್ಮ ಮನೆಗೆ ಬಂದಿರುತ್ತಾರೆ. 1983 ರಲ್ಲಿ ನಾನು ನನ್ನ ಮದುವೆಗೆ ಅವರನ್ನು ಕರೆಯಲು ಹೋಗಿದ್ದೆ, ಅಗ ಅವರು ನಾನು ಮನೆಗೆ ಬರುವುದಿಲ್ಲ, ನಾನು ಮನೆಗೆ ಬಂದು ಆಶೀರ್ವಾದ ಮಾಡುವುದಿಲ್ಲ ಎಂದು ಹೇಳಿರುತ್ತಾರೆ. ನನ್ನ ತಂದೆ ಮತ್ತು ತಾಯಿಯ ವಿರಸದ ಸಮಯದಲ್ಲಿ ನಾನು ನನ್ನ ತಾಯಿಯೊಂದಿಗೆ ಮನೆಯಲ್ಲಿದ್ದೆ. ದಾವಾ ಆಸ್ತಿ ಎನ್ನುವುದು ನಿಡಿ.1 ಮತ್ತು ನಿಡಿ.3 ರ ಪ್ರಕಾರ ನನ್ನ ತಂದೆ ಇ. ಪಿ. ಲ್ಯಾಜರಸ್ ರವರ ಹೆಸರಿಗೆ ಮಾತ್ರ ತೀರ್ಪು ಆಗಿತ್ತು ನನ್ನ ತಾಯಿಯ ಜಂಟಿ ಹೆಸರಿಗೆ ತೀರ್ಪು ಆಗಿತ್ತು ಎಂದರೆ ಸರಿಯಲ್ಲ, ಆದ್ದರಿಂದ ನಿಡಿ.2 ರ ಪಟ್ಟೆಯನ್ನು ನನ್ನ ತಂದೆಯ ಹೆಸರಿಗೆ ಮಾತ್ರ ಮಾಡಲಾಗಿತ್ತು ಎಂದರೆ ಸರಿಯಲ್ಲ, ದಾವಾ ಆಸ್ತಿಯನ್ನು 1-1-1973 ರ ನಿಕಟಪೂರ್ವ ನನ್ನ ತಂದೆ ಅವರ ಸ್ವಂತ ಹಕ್ಕಿನಲ್ಲಿ ಗೇಣಿಗೆ ಪಡೆದು ಅನುಭವಿಸಿಕೊಂಡು ಬರುತ್ತಿದ್ದರು ಮತ್ತು ಅವರು ಸದ್ರಿ ಆಸ್ತಿಯನ್ನು ತನ್ನ ಹೆಂಡತಿ ಮತ್ತು

ಮಕ್ಕಳೊಂದಿಗೆ ಅನುಭವಿಸಿಕೊಂಡು ಬಂದಿದ್ದರು ಎಂದರೆ ಸರಿ. ಆ ರೀತಿ ಜಂಟಿಯಾಗಿ ಅನುಭವಿಸಿಕೊಂಡ ಆಸ್ತಿಯನ್ನು ಜಂಟಿ ಹಕ್ಕುದಾರರ ಪರವಾಗಿ ನನ್ನ ತಂದೆಯೇ ಫಾರಂ ನಂ.7 ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನನ್ನ ತಾಯಿ ತಂದೆಯ ಹೆಸರಿನಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಈ ವಿಷಯ ಫಾರಂ ನಂ.7 ರ ಅರ್ಜಿಯಲ್ಲಿ ಕಂಡುಬರುತ್ತದೆ. ಅದರ ನಕಲನ್ನು ನಾನು ವಕೀಲರಿಗೆ ನೀಡಿದ ಬಗ್ಗೆ ನೆನಪಿಲ್ಲ, ಆದರೆ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಯಾವುದೇ ತೊಂದರೆ ಇಲ್ಲ. ಸದ್ರಿ ಅರ್ಜಿಯಲ್ಲಿ ನನ್ನ ತಂದೆ ಸ್ವಂತ ಹಕ್ಕಿನಲ್ಲಿ ಗೇಣಿಗೆ ಪಡೆದು ನನ್ನ ತಂದೆಯೇ ಸದ್ರಿ ಅರ್ಜಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ಸದ್ರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಮನೆಯನ್ನು ಮಾಡಿ ಅಭಿವೃದ್ಧಿ ಮಾಡಿದ್ದು ನನ್ನ ತಂದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮನೆಯ ಮುಂದಿನ ಛಾವಣಿ ಮತ್ತು ಹಟ್ಟಿಯನ್ನು ನನ್ನ ತಂದೆ ಕಟ್ಟಿರುತ್ತಾರೆಂದು ನುಡಿಯುತ್ತಾರೆ. ಮುಂದುವರಿದು ಮನೆಯನ್ನು ಚರ್ಚ್‌ನ ಬಿಷಪ್ ರವರು ಕಟ್ಟಿಸಿರುತ್ತಾರೆ. ನಾನು ಹೇಳಿದ ಹಾಗೆ ಸದ್ರಿ ಮನೆಯನ್ನು ಬಿಷಪ್‌ರವರು ಕಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಮಾಹಿತಿಯನ್ನು ನೀಡುವಾಗ ನನ್ನ ತಂದೆ ತಾಯಿಯ ವಿರಸದ ಬಗ್ಗೆ ನಾನು ಮಾಹಿತಿಯನ್ನು ನೀಡಿರುವುದಿಲ್ಲ. 1990 ರಲ್ಲಿ ಉಡುಪಿಯ ಅಂಬಲಪಾಡಿ ಯಲ್ಲಿರುವ ಮನೆಯನ್ನು ಕಟ್ಟಿಸಿರುತ್ತೇನೆ. 1990 ನೇ ಇಸವಿಯವರೆಗೆ ನಾನು ಮಣೂರು ಗ್ರಾಮದ ನಿವಾಸಿ ಎಂದು ಕಂಡುಬರುತ್ತದೆ. 1990 ರ ನಂತರ ದಾಖಲೆಗಳಲ್ಲಿ ನಾನು ಉಡುಪಿಯ ನಗರದ ಪರಿಸರದ ನಿವಾಸಿಯಾಗಿರುವುದು ಕಂಡುಬರುತ್ತದೆ. ನನ್ನ ತಂದೆ ರೈಲ್ವೆ ಇಲಾಖೆಯಲ್ಲಿ ನೌಕರರಾಗಿದ್ದು, ಅವರು 1969, 1970 ರಲ್ಲಿ ನಿವೃತ್ತರಾಗಿರುತ್ತಾರೆ. ನನ್ನ ತಂದೆ ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. 1983 ರ ನಂತರ

ನನ್ನ ತಂದೆ, ತಾಯಿ ಸಂಬಂಧ ಚೆನ್ನಾಗಿತ್ತು. ನನ್ನ ತಂದೆ ತಾಯಿ ಒಳ್ಳೆಯ ರೀತಿಯಲ್ಲಿದ್ದರು. ನನ್ನ ತಂದೆ ತಾಯಿಗೆ ನನ್ನನ್ನು ಸೇರಿ ಒಟ್ಟು 8 ಜನ ಮಕ್ಕಳು, ಅದರಲ್ಲಿ ಇಬ್ಬರು ಸಣ್ಣ ಪ್ರಾಯದಲ್ಲಿ ಮೃತಪಟ್ಟಿರುತ್ತಾರೆ. ತಂದೆ, ತಾಯಿಗೆ ಮಕ್ಕಳ ಮೇಲೆ ಸಹಜವಾಗಿ ಪ್ರೀತಿ ಇತ್ತು. ನನ್ನ ತಂದೆ ತಾಯಿಗೆ ಯಾವುದಾದರೂ ಮಕ್ಕಳಿಗೆ ತೊಂದರೆ ಮಾಡಬೇಕು ಎಂದು ಯಾವುದೇ ಇಚ್ಛೆ ಇರಲಿಲ್ಲ.

ನನ್ನ ತಂದೆ ಮೃತಪಡುವ ಸಮಯದಲ್ಲಿ ಮತ್ತು ಅವರ ಪ್ರಾಯದ ಸಮಯದಲ್ಲಿ ನನ್ನ ತಂದೆ ಮತ್ತು ತಾಯಿಯ ಜೊತೆ ಇದ್ದದ್ದು ನಾಲ್ಕನೇ ಪ್ರತಿವಾದಿ, ನಾನು ಮತ್ತು ಅನಸ್ಥಾಳ ಉಡುಪಿ ಮತ್ತು ಐರೋಡಿಯಲ್ಲಿದ್ದೆವು, ವಾದಿ ಮುಂಬೈನಲ್ಲಿದ್ದರು. ಒಂದನೇ ಪ್ರತಿವಾದಿ ಅಕ್ಕ ಕ್ಲಾರಾ ಕನ್ಯಾಕುಮಾರಿಯಲ್ಲಿ, ಎರಡನೇ ಪ್ರತಿವಾದಿ ದುಬೈನಲ್ಲಿದ್ದರು. ತಂದೆ ಮೃತಪಟ್ಟ ನಂತರ ಆರ್‌ಟಿಸಿಯಲ್ಲಿ ವಾರೀಸು ಪ್ರಕಾರ ಬದಲಾವಣೆ ಮಾಡುವಂತೆ ಅರ್ಜಿಯನ್ನು ಯಾರು ಕೊಟ್ಟಿದ್ದಾರೆಂದು ಗೊತ್ತಿಲ್ಲ. ನಾನು 2011 ನೇ ಸಾಲಿನಲ್ಲಿ ನನ್ನ ತಂದೆಯವರ ವಂಶವೃಕ್ಷ ತಯಾರು ಮಾಡುವಾಗ ಅರ್ಜಿ ಸಲ್ಲಿಸಿರುತ್ತೇನೆ. ಸದ್ರಿ ಅರ್ಜಿಯ ಪ್ರಕಾರ ತಹಶೀಲ್ದಾರ್, ಬ್ರಹ್ಮಾವರರವರು ವಂಶವೃಕ್ಷವನ್ನು ನೀಡಿರುತ್ತಾರೆ. ಅದನ್ನು ತಪ್ಪಾಗಿ ನೀಡಿರುತ್ತಾರೆಂದು ನುಡಿಯುತ್ತಾರೆ. ಸದ್ರಿ ವಂಶವೃಕ್ಷದಲ್ಲಿ ಅನಸ್ಥಾಳ ಮತ್ತು ಅವಳ ಮಕ್ಕಳ ಹೆಸರನ್ನು ಸೇರಿಸಬೇಕು ಎಂದು ನುಡಿಯುತ್ತಾರೆ. ಆ ರೀತಿ ವಂಶವೃಕ್ಷವನ್ನು ಆಧರಿಸಿ ವಾದಿ ಆರ್‌ಟಿಸಿ ಬದಲಾವಣೆ ಮಾಡಬೇಕೆಂದು ಅರ್ಜಿ ಸಲ್ಲಿಸಿದಾಗ ನಾನು ಆ ರೀತಿ ಬದಲಾವಣೆ ಮಾಡಿದರೆ ವಾದಿ ಪರಭಾರೆ ಮಾಡುತ್ತಾರೆಂದು ನಾನು ಆಕ್ಷೇಪಣೆಯನ್ನು ಸಲ್ಲಿಸಿದ್ದೆ. ನನ್ನ ಆಕ್ಷೇಪಣೆಯನ್ನು ಆಧರಿಸಿ ತಹಶೀಲ್ದಾರರು ಕ್ರಮವನ್ನು ಕೈಗೊಂಡಿರುವುದಿಲ್ಲ. ನಂತರ ವಾದಿ ಈ ವ್ಯಾಜ್ಯವನ್ನು ದಾಖಲು ಮಾಡಿರುತ್ತಾರೆ. ವಾದಿ ತನ್ನ ಒಬ್ಬನ ಹೆಸರಿಗೆ ಆರ್‌ಟಿಸಿ

ಆಗಬೇಕೆಂದು ಕೇಳಿದ್ದರಾ ಅಥವಾ ಎಲ್ಲರ ಹೆಸರಿಗೆ ಆರ್‌ಟಿಸಿ ಆಗಬೇಕೆಂದು ಕೇಳಿದ್ದಾರಾ ನನಗೆ ಗೊತ್ತಿಲ್ಲ.

ನಿಡಿ.8 ರ ವೀಲು ತಯಾರಿಸುವಾಗ ನೀವು ಹಾಜರಿದ್ದಿರಾ ಎಂದರೆ ಸಾಕ್ಷಿ ಆ ವೀಲು ಆದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ವೀಲಿನ ಬಗ್ಗೆ ನನಗೆ ಮಾಹಿತಿ ಕೊಟ್ಟದ್ದು ಚರ್ಚ್‌ನ ಫಾದರ್ ಆದ ಮಾರ್ಕ್ ಡೇಸಾ ರವರು ನೀಡಿರುತ್ತಾರೆ. ಸದ್ರಿ ಮಾಹಿತಿಯನ್ನು ನನ್ನ ತಂದೆ ತೀರಿ ಹೋಗಿ ಒಂದು ತಿಂಗಳ ನಂತರ ಫೋನ್ ಕರೆ ಮಾಡಿ ತಿಳಿಸಿರುತ್ತಾರೆ. ಆ ಸಮಯದಲ್ಲಿ ವೀಲನ್ನು ಜಾರಿ ಮಾಡಲು ನಾನಾಗಲೀ ನನ್ನ ಹೆಂಡತಿ ಯಾಗಲೀ ಪ್ರಯತ್ನಿಸಿರುವುದಿಲ್ಲ. ನಿಡಿ.8 ರಲ್ಲಿ ಸಾಕ್ಷಿ ಎಂದು ಸಹಿ ಮಾಡಿರುವ ಬಿ.ಎನ್.ಪ್ರಕಾಶ್ ಶಿವಮೊಗ್ಗ ಜಿಲ್ಲೆಯ ಸಾಗರ ಸಮೀಪದವರು. ಇನ್ನೊಬ್ಬರು ಎ.ಎಸ್. ಪ್ರತಾಪ್ ಎನ್ನುವವರು ಮಡಿಕೇರಿಯವರು. ನನಗೆ ಅವರಿಬ್ಬರೂ ಸಹಾ ಕಳೆದ 16, 17 ವರ್ಷಗಳಿಂದ ಪರಿಚಯಸ್ಥರು. ಅವರಿಬ್ಬರೂ ಸಹಾ ಮುಂಬೈನ ಯಾವುದೋ ಒಂದು ಕಂಪೆನಿಯಲ್ಲಿ ಸೇಲ್ಸ್ ರೆಪ್ರೆಸೆಂಟೇಟಿವ್ ಆಗಿ ಕೆಲಸ ಮಾಡುತ್ತಿದ್ದಾರೆ. ನಿಡಿ.8 ರ ವೀಲುನಾಮೆ ಯನ್ನು ಉಡುಪಿಯ ವಕೀಲರಾದ ವಿಶ್ವನಾಥ ಶೆಟ್ಟಿರವರು ತಯಾರಿಸಿರುತ್ತಾರೆ. ಆ ದಾಖಲೆಯನ್ನು ತಯಾರಿಸುವಾಗ ನಾನು ಅಲ್ಲಿ ಇರಲಿಲ್ಲ. ನನ್ನ ತಂದೆ ಮತ್ತು ಪ್ರಕಾಶ್‌ರವರು ಒಟ್ಟಿಗೆ ಹೋಗಿ ವಕೀಲರ ಬಳಿ ಚರ್ಚಿಸಿ ಮಾಹಿತಿ ತಯಾರಿಸಿದ ಬಗ್ಗೆ ನನಗೆ ಸಾಕ್ಷಿ ಪ್ರಕಾಶ್‌ರವರು ಹೇಳಿದ ಮೇಲೆ ಗೊತ್ತಾಯಿತು. ಸದ್ರಿ ವೀಲನ್ನು ಯಾರ ಮಾಹಿತಿ ಮೇರೆಗೆ ಮತ್ತು ಯಾರ ಸಮಕ್ಷಮದಲ್ಲಿ ತಯಾರಿಸಲಾಯಿತೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಪ್ರಕಾಶ್ ರವರರಿಗೆ ಈಗ 45, 48 ವರ್ಷ ವಯಸ್ಸಾಗಿರಬಹುು. ಇನ್ನೊಬ್ಬ ಸಾಕ್ಷಿದಾರ ಪ್ರತಾಪ್‌ರವರ ವಯಸ್ಸು 42 ಆಗಿರಬಹುದು. ಆ ಇಬ್ಬರೂ ಸಾಕ್ಷಿದಾರರು ನನ್ನ ತಂದೆಗೆ ಸ್ನೇಹಿತರು ಅಲ್ಲ, ಸಂಬಂಧಿಕರು ಅಲ್ಲ, ಸಮಕಾಲೀನದವರು ಅಲ್ಲ, ಒಂದೇ

ಗ್ರಾಮದವರು ಅಲ್ಲ ಎಂದರೆ ಸರಿ. ಸದ್ರಿ ಇಬ್ಬರೂ ವ್ಯಕಿತಗಳು 1996 ರಿಂದ ಮುಂಬೈ ಕಂಪೆನಿಯಲ್ಲಿ ರೆಪ್ರೆಸೆಂಟೇಟಿವ್ ಆಗಿ ಕೆಲಸ ಮಾಡುತ್ತಿದ್ದರು.

ಸಾಕ್ಷಿ ಪ್ರಕಾಶ್ ಮತ್ತು ಪ್ರತಾಪ್ ಈಗ ಉಡುಪಿಯಲ್ಲಿ ವಾಸವಿದ್ದಾರೆಂದು ನುಡಿಯುತ್ತಾರೆ. ಇತ್ತೀಚೆಗೆ ನಾಲ್ಕೈದು ವರ್ಷಗಳ ಹಿಂದೆ ಅವರನ್ನು ನಾನು ಭೇಟಿ ಯಾಗಿದ್ದೇನೆ. ನನ್ನ ತಂದೆ ನಿವೃತ್ತಿಯಾದ ನಂತರ ಹೆಚ್ಚಾಗಿ ವಾಸ್ತವ್ಯ ಇದ್ದದ್ದು ತೆಕ್ಕಟ್ಟೆ ಗ್ರಾಮ ಮತ್ತು ಮಣೂರು ಗ್ರಾಮದಲ್ಲಿ. ನನ್ನ ತಂದೆಗೆ ಸದ್ರಿ ಗ್ರಾಮಗಳಲ್ಲಿ ಅನೇಕ ಸ್ನೇಹಿತರು, ಸಂಬಂಧಿಕರು ಮತ್ತು ಸಮಕಾಲೀನ ಅತ್ಮೀಯರು ಇದ್ದರು ಎಂದರೆ ಸರಿ. ನನ್ನ ತಂದೆಗೆ ಊರಿನಲ್ಲಿ ಸ್ನೇಹಿತರು, ಸಂಬಂಧಿಕರು ಮತ್ತು ಸಮಕಾಲೀನ ಅತ್ಮೀಯರು ಇದ್ದರೂ ಸಹಾ ಸಾಕ್ಷಿ ಪ್ರಕಾಶ್ ಮತ್ತು ಪ್ರತಾಪ್ ನನ್ನು ಯಾವ ಕಾರಣಕ್ಕೆ ವೀಲುನಾಮೆಯಲ್ಲಿ ಸಾಕ್ಷಿದಾರರನ್ನಾಗಿ ಮಾಡಿದ್ದಾರೆಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಂದೆಯವರ ಮಾತೃಭಾಷೆ ಕೊಂಕಣಿ ಅವರು ಕನ್ನಡದಲ್ಲಿ ಸಹಾ ಮಾತನಾಡುತ್ತಿದ್ದರು. ಸಾಕ್ಷಿ ಮುಂದುವರಿದು ನನ್ನ ತಂದೆಯ ಮಾತೃಭಾಷೆ ತಮಿಳು ಎಂದು ನುಡಿಯತ್ತಾರೆ.

ನಿಡಿ.8 ರಲ್ಲಿರುವ ಸಹಿಗಳು ನನ್ನ ತಂದೆಯದ್ದು ಅಲ್ಲ ಎಂದರೆ ಸಾಕ್ಷಿ ಅದು ನನ್ನ ತಂದೆಯ ಸಹಿ ಎಂದು ನುಡಿಯತ್ತಾರೆ. ಸಾಕ್ಷಿ ಮುಂದುವರಿದು ಸದ್ರಿ ದಾಖಲೆಯನ್ನು ನನ್ನ ಸಮಕ್ಷಮ ಮಾಡದ ಕಾರಣ ಸದ್ರಿ ಸಹಿ ತನ್ನ ತಂದೆಯದ್ದು ಅಲ್ಲ ಎಂದು ನುಡಿಯುತ್ತಾರೆ. ಮುಂದುವರಿದು ನಾನು ನನ್ನ ತಂದೆಯ ಸಹಿಯನ್ನು ಬೇರೆ ದಾಖಲೆ ಗಳಲ್ಲಿ ನೋಡಿರುತ್ತೇನೆ. ಅದರ ಆಧಾರದ ಮೇಲೆ ನಿಡಿ.8 ರಲ್ಲಿರುವ ಸಹಿ ತನ್ನ ತಂದೆಯದ್ದೇ ಎಂದು ನುಡಿಯುತ್ತಾರೆ. ನಿಡಿ.8 ರಲ್ಲಿರುವ ಸಹಿ ನನ್ನ ತಂದೆಯದ್ದೇ ಎಂದು ಯಾರಾದರೂ ಹೇಳಿದ್ದಾರೆಯೇ ಎಂದರೆ ಸಾಕ್ಷಿ ನನಗೆ ಅದರ ಅಗತ್ಯವಿಲ್ಲದ ಕಾರಣ ನಾನು ವಿಚಾರಿಸಿಲ್ಲ ಎಂದು ನುಡಿಯುತ್ತಾರೆ. ನಿಡಿ.8 ರ ದಾಖಲೆ ಆಗುವಾಗ ನನ್ನ ಪತ್ನಿ ಎಲ್ಲಿಯ

ನಿವಾಸಿಯಾಗಿದ್ದರು ಎಂದು ಹೇಳಲು ಸಾಧ್ಯವಿಲ್ಲ. ಸಾಕ್ಷಿ ಮುಂದುವರಿದು, ಆಕೆ ಅಂಬಲಪಾಡಿ ಮತ್ತು ಮಣೂರು ಎರಡೂ ಕಡೆಗಳಲ್ಲಿ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ದಾಖಲೆ ಪ್ರಕಾರ ಅವರು ಅಂಬಲಪಾಡಿಯ ನಿವಾಸಿಯಾಗಿದ್ದರು. ಆ ಸಮಯದಲ್ಲಿ ನನ್ನ ತಂದೆಯೊಂದಿಗೆ ನನ್ನ ತಾಯಿ ವಾಸಿಸುತ್ತಿದ್ದರು. ದಾವಾ ಆಸ್ತಿಯಲ್ಲಿ ನನ್ನ ತಾಯಿಗೆ ಯಾವುದೇ ಭಾಗ ನೀಡದೇ ಇರಲು ಯಾವುದೇ ಕಾರಣ ಇದೆಯಾ, ಇಲ್ಲವೋ ಗೊತ್ತಿಲ್ಲ. ನನ್ನ ತಂದೆಗೆ ಉಳಿದ ಮಕ್ಕಳಿಗೆ ಆಸ್ತಿಯನ್ನು ನೀಡದೇ ಇರಲು ಯಾವುದಾದರೂ ಕಾರಣ ಇದೆಯಾ ಎಂದರೆ ಸಾಕ್ಷಿ, ಉಳಿದ ಮಕ್ಕಳು ಯಾರೂ ಅವರನ್ನು ನೋಡುತ್ತಿರಲಿಲ್ಲ, ನಾನು ನೋಡುತ್ತಿದ್ದೆ ಎನ್ನುವುದೇ ಕಾರಣವಾಗಿರುತ್ತದೆ.

ವೀಲುನಾಮೆಯನ್ನು ತಯಾರಿಸಿದ ಬಗ್ಗೆ ನನ್ನ ಹತ್ತಿರ ಅಥವಾ ತನ್ನ ಇತರೆ ಮಕ್ಕಳ ಬಳಿ ಹೇಳಿರುವುದಿಲ್ಲ. ಆ ರೀತಿ ದಾಖಲೆ ಬರೆದಿಡುವ ಅಗತ್ಯತೆ ಇತ್ತಾ ಎಂದರೆ ನನಗೆ ಗೊತ್ತಿಲ್ಲ. ನಿಡಿ.8 ರ ದಾಖಲೆ ತಯಾರಿಸುವಾಗ ನನ್ನ ತಂದೆಗೆ 85 ರಿಂದ 86 ವರ್ಷ ವಯಸ್ಸಾಗಿತ್ತು. 1995-96 ನೇ ಸಾಲಿನಲ್ಲಿ ನನ್ನ ತಂದೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಅಸ್ವಸ್ಥರಾಗಿದ್ದರು ಎಂದರೆ ಸರಿಯಲ್ಲ. ತಂದೆ ವಯೋ ಸಂಬಂಧಿ ಕಾಯಿಲೆಗೆ ತುತ್ತಾಗಿದ್ದರು ಎಂದರೆ ಸರಿಯಲ್ಲ. ನಿಡಿ.8 ರ ದಾಖಲೆ ಆಗಿದೆ ಎನ್ನಲಾದ ಸಮಯದಲ್ಲಿ ತಂದೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಅಸ್ವಸ್ಥರಾಗಿದ್ದರು ಎಂದರೆ ಸರಿಯಲ್ಲ. ಅನೇ ವರ್ಷಗಳ ಕಾಲ ಕಾಯಿಲೆಯಿಂದ ನರಳಿ ಮೃತಪಟ್ಟರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ಕೇವಲ 15 ದಿನಗಳು ಮಾತ್ರ ಕಾಯಿಲೆಯಿಂದ ಮೃತಪಟ್ಟಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ನನ್ನ ತಂದೆ ಸಾಯುವ 15 ದಿನಗಳ ಮುಂದೆ ಗುದದ್ವಾರದಲ್ಲಿ ರಸ್ತಸ್ರಾವವಾಗಿ, ರಕ್ತಸ್ರಾವ ನಿಲ್ಲದ ಕಾರಣ ಅವರು ಮೃತಪಟ್ಟಿರುತ್ತಾರೆಂದು ನುಡಿಯುತ್ತಾರೆ.

ನನ್ನ ತಂದೆಗೆ ಅವರ ಪತ್ನಿ ಮತ್ತು ಮಕ್ಕಳ ಮೇಲೆ ಅತಿಯಾದ ಪ್ರೀತಿ ಮತ್ತು ವಿಶ್ವಾಸ ಇತ್ತಾ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ಅವರು ತನ್ನ ಕಾಲಾದ ನಂತರ ತನ್ನ ಆಸ್ತಿ ತನ್ನ ಹೆಂಡತಿ ಮತ್ತು ಮಕ್ಕಳಿಗೆ ಸಿಗಬೇಕು ಎನ್ನುವ ಉತ್ಕಟ ಇಚ್ಛೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿ ಮುಂಬೈನಲ್ಲಿ ಕೆಲಸದಲ್ಲಿದ್ದರೂ ಸಹಾ ಅವರ ತಂದೆ ತಾಯಿಯ ಮೇಲೆ ಅತಿಯಾದ ಪ್ರೀತಿ ಮತ್ತು ಭಕ್ತಿ ಇದ್ದ ಕಾರಣ ಆಗಿಂದಾಗ್ಗೆ ಊರಿಗೆ ಬಂದು ತಂದೆ ತಾಯಿಗಳ ಆರೋಗ್ಯವನ್ನು ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ. ನನ್ನನ್ನು ಹೊರತುಪಡಿಸಿ ಉಳಿದ ಮಕ್ಕಳಿಗೆ ಸಹಾ ತಂದೆ ತಾಯಿಯ ಮೇಲೆ ಅತಿಯಾದ ಪ್ರೀತಿ ಮತ್ತು ಭಕ್ತಿ ಇತ್ತು ಎಂದರೆ ಸರಿಯಲ್ಲ. 1983 ರಲ್ಲಿ ನಾನು ಮದುವೆಯಾದ ನಂತರ ನನ್ನ ಪತ್ನಿ ಮತ್ತು ಮಕ್ಕಳೊಂದಿಗೆ ಉಡುಪಿಯ ಖಾಯಂ ನಿವಾಸಿಯಾಗಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ತಂದೆ ತಾಯಿಯನ್ನು ಯಾವತ್ತೂ ಪ್ರೀತಿಯಿಂದಾಗಲೀ, ವಿಶ್ವಾಸದಿಂದಾಗಲೀ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೆಲವು ಭಾರಿ ನನ್ನ ತಂದೆ ತಾಯಿಯ ಮೇಲೆ ಹಲ್ಲೆ ಮಾಡಿ ಗಲಾಟೆ ಮಾಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗಾಗಲೀ, ತಾಯಿಗಾಗಲೀ ನನ್ನ ಮೇಲೆ ಮತ್ತುನನ್ನ ಹೆಂಡತಿ ಮಕ್ಕಳ ಮೇಲೆ ಯಾವುದೇ ಪ್ರೀತಿ, ವಿಶ್ವಾಸ ಇರಲಿಲ್ಲ ಎಂದರೆ ಗೊತ್ತಿಲ್ಲ. ನಿಡಿ.8 ರ ವೀಲುನಾಮೆಯನ್ನು ನಾನು ನನ್ನ ಸ್ನೇಹಿತರಾದ ಪ್ರಕಾಶ ಮತ್ತು ಪ್ರತಾಪ್ ಹಾಗೂ ವಕೀಲರಾದ ವಿಶ್ವನಾಥ ಶೆಟ್ಟಿರವರು ಪರಸ್ಪರ ಶಾಮೀಲಾಗಿ ಸೃಷ್ಟಿಸಿದ ಸುಳ್ಳು ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪ್ರಕಾಶ್ ಮತ್ತು ಪ್ರತಾಪ್ ನನ್ನ ಸ್ನೇಹಿತರಲ್ಲ. ನನ್ನ ತಂದೆಗೆ ಪ್ರಕಾಶ್ ಮತ್ತು ಪ್ರತಾಪ್‌ರವರ ಪರಿಚಯ ಇಲ್ಲದಿದ್ದರೂ ಸಹಾ ಅವರನ್ನು ಉಪಯೋಗಿಸಿಕೊಂಡು ಸುಳ್ಳು ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ

ಕಾರಣಕ್ಕೆ ನಿಡಿ.8 ರ ದಾಖಲೆಗೆ ಪ್ರಕಾಶ್ ಮತ್ತು ಪ್ರತಾಪ್‌ರವರ ತಂದೆಯ ಹೆಸರು, ವಿಳಾಸ ಮತ್ತು ಯಾವುದೇ ವಿವರಣೆಯನ್ನು ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಡಿ.9 ರ ದಾಖಲೆ ತಯಾರಿಸುವಾಗ ನಾನು ಇರಲಿಲ್ಲ. ಆ ದಾಖಲೆಯನ್ನು ಯಾರ ಸಮಕ್ಷಮದಲ್ಲಿ, ಯಾರ ಮಾಹಿತಿ ಪ್ರಕಾರ ಎಲ್ಲಿ ಮತ್ತು ಯಾವಾಗ ತಯಾರಿಸಲಾಯಿತು ಎಂದು ಗೊತ್ತಿಲ್ಲ. ರವಿಶಂಕರ್ ನಾಯಕ್ ಮತ್ತು ಗಿರಿಜಾರವರು ನನಗೆ ಪರಿಚಿತರು. ಸದ್ರಿ ದಾಖಲೆಯಾಗುವಾಗ ನನಗೆ ಪರಿಚಯ ಇರಲಿಲ್ಲ. ನನಗೆ ಅವರನ್ನು ಯಾರೂ ಪರಿಚಯ ಮಾಡಿರುವುದಿಲ್ಲ. ರವಿಶಂಕರ್ ನಾಯಕ್‌ರವರಿಗೆ ಈಗ 30 ವರ್ಷ ವಾಗಿರಬಹುದು, ಗಿರಿಜಾ ಎನ್ನುವವರಿಗೆ ಈಗ 60 ವರ್ಷವಾಗಿರಬಹುದು. ನನ್ನ ತಾಯಿ ಈಗ ಜೀವಂತ ಇದ್ದಿದ್ದರೆ 85 ರಿಂದ 90 ವರ್ಷ ಆಗಿದ್ದಿರಬಹುದು. ರವಿಶಂಕರ್ ನಾಯಕ್ ಮತ್ತು ಗಿರಿಜಾರವರ ಮನೆಗಳು ಮಣೂರು ಗ್ರಾಮದಲ್ಲಿರುವ ನನ್ನ ತಂದೆ ತಾಯಿಯ ಮನೆಯಿಂದ ಸುಮಾರು 25 ಕಿ.ಮಿ. ದೂರದಲ್ಲಿರುತ್ತದೆ. ನಮ್ಮ ಕಲ್ಯಾಣಪುರದ ಮನೆಯಿಂದ ರವಿಶಂಕರ್ ನಾಯಕ್‌ರವರ ಮನೆ 5 ಕಿ.ಮೀ. ದೂರದಲ್ಲಿದೆ ಅದೇ ರೀತಿ ಗಿರಿಜಾರವರ ಮನೆ 1 ಕಿ.ಮಿ. ದೂರದಲ್ಲಿದೆ.

ನನ್ನ ತಾಯಿಗೆ 2008 ರ ಸುಮಾರಿಗೆ 15 ಜನ ಮೊಮ್ಮಕ್ಕಳು ಇದ್ದರು. ನಿಡಿ.9 ರಲ್ಲಿ ತೋರಿಸಿರುವ ಮೊಮ್ಮಕ್ಕಳನ್ನು ಬಿಟ್ಟು ಬೇರೆ ಮೊಮ್ಮಕ್ಕಳ ಮೇಲೆ ದ್ವೇಷ ಏನದಾರೂ ಇತ್ತಾ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಅನಕ್ಷರಸ್ಥೆ ಮತ್ತು ಹಳ್ಳಿಯ ಒಬ್ಬ ಮುಗ್ಧೆ ಹೆಂಗಸು ಮತ್ತು ಹಳ್ಳಿಯ ನಿವಾಸಿ ಎಂದರೆ ಸರಿ. ನನ್ನ ತಾಯಿ ತನ್ನ ಸ್ವಂತ ಮಕ್ಕಳನ್ನು ಬಿಟ್ಟು ನಿಡಿ.9 ರ ದಾಖಲೆ ಮಾಡಲು ಏನಾದರೂ ವಿಶೇಷ ಕಾರಣ ಇತ್ತಾ ಎಂದರೆ ನನಗೆ ಗೊತ್ತಿಲ್ಲ. ನಿಡಿ.9 ರಲ್ಲಿ ಕಾಣುವ ಹೆಬ್ಬೆಟ್ಟಿನ ಗುರುತುಗಳು ಅಪೋಲಿನ್ ರಾಜರಸ್‌ರವರದ್ದು ಅಲ್ಲ ಎಂದರೆ ಸಾಕ್ಷಿ ಅದು ಅವರದ್ದೇ ಆಗಿರುತ್ತದೆ, ನಾನು ಹೆಬ್ಬೆಟ್ಟಿನ

ಗುರುತನ್ನು ನೋಡಿ ಅವರದ್ದೇ ಆಗಿರುತ್ತದೆ ಎಂದು ಹೇಳುತ್ತೇನೆ. ನನ್ನ ತಾಯಿಗೆ ಮಣೂರಿನಲ್ಲಿ ಸಂಬಂಧಿಕರು, ಆತ್ಮೀಯರು ಮತ್ತು ನೆರೆಕೆರೆಯವರು ಇದ್ದರು ಎಂದರೆ ಸರಿ. ರವಿಶಂಕರ್ ನಾಯಕ್ ಮತ್ತು ಗಿರಿಜಾರವರು ನೆರೆಮನೆಯವರಲ್ಲ, ಸಂಬಂಧಿಕರಲ್ಲ, ಆತ್ಮೀಯರು ಅಲ್ಲ ಎಂದರೆ ಸಾಕ್ಷಿ ಗಿರಿಜಾ ನನ್ನ ತಾಯಿ ಸಾಯುವವರೆಗೂ ನನ್ನ ತಾಯಿಯ ಸೇವೆಯನ್ನು ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ನನ್ನ ತಾಯಿಗೆ ಗಿರಿಜಾರವರ ಪರಿಚಯ ಯಾರ ಮೂಲಕ ಆಯಿತು ಎಂದು ಗೊತ್ತಿಲ್ಲ, ನೇಜಾರು ಗ್ರಾಮದವರು ಪರಿಚಯ ಮಾಡಿಕೊಟ್ಟಿದ್ದಾರೆಂದು ನುಡಿಯುತ್ತಾರೆ. ನಾನು ವೈಯಕ್ತಿಕವಾಗಿ ತಿಳಿದುಕೊಂಡಿಲ್ಲ ನನಗೆ ಅದರ ಅಗತ್ಯತೆ ಇಲ್ಲ. ನನಗೆ ಗಿರಿಜಾ ಈಗ್ಗೆ 12 ವರ್ಷಗಳಿಂದ ಪರಿಚಯ.

ಗಿರಿಜಾರವರ ಬಳಿ ನಿಡಿ.9 ರ ವೀಲುನಾಮೆಯ ಬಗ್ಗೆ ವಿಚಾರಿಸಿದ್ದೀರಾ ಎಂದರೆ ನಾನು 2008 ರ ನಂತರ ವಿಚಾರಿಸಿದ್ದೇನೆ, ಸಾಕ್ಷಿ ಮುಂದುವರಿದು ನಿಡಿ.9 ರ ವೀಲು ನನ್ನ ಕೈ ಸೇರಿದ ಮೇಲೆ ವಿಚಾರಿಸಿದ್ದೇನೆ. ನಾನು ನೇಜಾರಿನಲ್ಲಿರುವ ಗಿರಿಜಾರವರ ಮನೆಗೆ ಹೋಗಿ ವಿಚಾರಿಸಿರುತ್ತೇನೆ. ಗಿರಿಜಾರವರ ಉದ್ಯೋಗ ಏನು ಎಂದು ನನಗೆ ಗೊತ್ತಿಲ್ಲ. ಅವರು ಎಲ್ಲಿ ಕೆಲಸ ಮಾಡಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ.

ರವಿಶಂಕರ್ ನಾಯಕ್ ರವರು ಸಿವಿಲ್ ಇಂಜೀನಿಯರ್ ಅಗಿ ಕೆಲಸ ಮಾಡುತ್ತಾನೆ. ಅವರು ಕಟ್ಟಡಗಳ ಗುತ್ತಿಗೆದಾರರಾಗಿರುತ್ತಾರೆ. ನನಗೆ ಅವರ ಪರಿಚಯ ಸುಮಾರು 8 ವರ್ಷಗಳಿಂದ ಇದೆ. ನಿಡಿ.9 ನ್ನು ತಯಾರು ಮಾಡಿದ್ದು ಯಾರು ಎಂದು ಗೊತ್ತಿಲ್ಲ. ನನ್ನ ತಂದೆ, ತಾಯಿ ಮೃತಪಟ್ಟ ನಂತರ ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಅವರ ಮತ್ತು ಇತರೆ ವಾರೀಸುದಾರರ ಹೆಸರಿಗೆ ಬದಲಾಯಿಸುವಂತೆ ಅರ್ಜಿ ಕೊಟ್ಟ ನಂತರ ದಾವಾ ಆಸ್ತಿಯನ್ನು ಹೇಗಾದರೂ ಮಾಡಿ ಕಬಳಿಸಬೇಕು ಎಂಬ ದುರುದ್ದೇಶದಿಂದ ನಿಡಿ.8 ಮತ್ತು

ನಿಡಿ.9 ರ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಉದಾಹರಣೆ ತಯಾರು ಮಾಡಲು ವಕೀಲರಿಗೆ ಅನುಭವವನ್ನು ನಾನೇ ಕೊಟ್ಟಿರುತ್ತೇನೆ. ದಿಃ 8-8-2011 ರಂದು ಉಧಾಹರಣೆ ತಯಾರಿಸುವಾಗ ನಿಡಿ.8 ಮತ್ತು ನಿಡಿ.9 ರ ದಾಖಲೆ ನನ್ನ ಬಳಿಯೇ ಇತ್ತು, ಅದನ್ನು ನಾನೇ ವಕೀಲರಿಗೆ ನೀಡಿರುತ್ತೇನೆ. ಆವಾಗ ನನ್ನ ತಂದೆ ದಿಃ10-10-1998 ರಂತೆ ನ್ನನ್ನ ಪರ ವೀಲುನಾಮೆ ಮಾಡಿದ ಬಗ್ಗೆ ಮತ್ತು ದಿಃ12-8-2008 ರಂದು ನನ್ನ ತಾಯಿ ನನ್ನ ಪರ ವೀಲುನಾಮೆ ಮಾಡಿದ್ದು ಅದನ್ನು ವಕೀಲರಿಗೆ ಕೊಟ್ಟಿದ್ದೇನೆ, ಆ ದಾಖಲೆಯನ್ನು ವಕೀಲರು ಪರಿಶೀಲಿಸಿದ್ದಾರೆ. ಆ ದಾಖಲೆ ಮತ್ತು ನನ್ನ ಹೇಳಿಕೆಯನ್ನು ಆಧರಿಸಿ ವಕೀಲರು ಉಧಾಹರಣೆಯನ್ನು ತಯಾರಿಸಿರುತ್ತಾರೆ. ನನ್ನ ಪರವಾಗಿ ನನ್ನ ತಂದೆ ತಾಯಿ ಬರೆದಿಟ್ಟಿದ್ದಾರೆ ಎನ್ನಲಾದ ವೀಲುನಾಮೆಯನ್ನು ನಾನು ಹಾಜರು ಮಾಡಿರುವುದಿಲ್ಲ ಎಂದರೆ ನಾನು ಹಾಜರು ಮಾಡಿದ್ದೇನೆಂದು ನುಡಿಯುತ್ತಾರೆ.

ನಾನು ನಿಡಿ.9 ರಲ್ಲಿ ಹೇಳಿದ ಸಾಕ್ಷಿದರರಾದ ರವಿಶಂಕರ್‌ನಾಯಕ್ ಮತ್ತು ಗಿರಿಜಾರವರು ನನ್ನ ನೆರೆಮನೆಯವರು ಮತ್ತು ಅತ್ಮೀಯರು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ನನ್ನ ಪರವಾಗಿ ವೀಲುನಾವೆಯನ್ನು ನೀಡಿದ ರೀತಿಯಲ್ಲಿ ಒಂದು ಪೋರ್ಜರಿ ವೀಲುನಾಮೆ ತಯಾರಿಸಿ ನಂತರ ಅದು ಸರಿಯಾಗಿಲ್ಲ ಎಂದು ನಿಡಿ.8 ಮತ್ತು ನಿಡಿ.9 ರ ದಾಖಲೆಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ತೀರ್ಪು ಆಗುವುದನ್ನು ತಡ ಮಾಡಲು ಉದ್ದೇಶದಿಂದ ಮೃತಪಟ್ಟ ನನ್ನ ಪತ್ನಿ ಮತ್ತು ಆಕೆಯ ಮೂರು ಮಕ್ಕಳ ಹೆಸರಿನಲ್ಲಿ ಕ್ರಮವಾಗಿ ನಿಡಿ.8 ಮತ್ತು ನಿಡಿ.9 ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಪರವಾಗಿ ಯಾವುದೇ ವೀಲು ಮಾಡಿರುವುದಿಲ್ಲ, ಅದೇ ರೀತಿ ನನ್ನ ಪತ್ನಿಯ ಪರವಾಗಿ ಯಾವುದೇ ವೀಲನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಾಯಿ ನನ್ನ ಪರವಾಗಿ ಅಥವಾ ನನ್ನ ಮಕ್ಕಳ ಪರವಾಗಿ ಯಾವುದೇ

ವೀಲುನಾವೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ.8 ಮತ್ತು ನಿಡಿ.9 ಮೋಸದ ದಾಖಲೆ ಮತ್ತು ಖೋಟಾ ದಾಖಲೆಗಳು ಎಂದರೆ ಸರಿಯಲ್ಲ. ಸದ್ರಿ ದಾಖಲೆಗಳು ಜಾರಿಗೆ ಬಂದಿರುವುದಿಲ್ಲ ಎಂದರೆ ಸರಿ. ವಾದಿ ಮತುತ ಪ್ರತಿವಾದಿಯರಿಗೆ ಯಾವುದೇ ಪಾಲು ಸಿಗಬಾರದು ಎಂದು ಮತ್ತು ಎಲ್ಲಾ ಆಸ್ತಿ ನನಗೆ ಸಿಗಬೇಕು ಎಂಬ ಉದ್ದೇಶಕ್ಕೆ ನಿಡಿ.8 ಮತ್ತು ನಿಡಿ.9 ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಕೃತ ಕುಷಿಗೋಸ್ಕರ ಸದ್ರಿ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ.11502 /2007 ನ್ನು ದಾಖಲಿಸಿದ್ದೇನೆ ಎಂದರೆ ಸರಿ. ಸದ್ರಿ ಪ್ರಕರಣದಲ್ಲಿ ನಿಡಿ.1 ರ ಆದೇಶದಂತೆ ನನ್ನ ತಂದೆಯ ಹೆಸರಿಗೆ ತೀರ್ಪಾದ ಆಸ್ತಿಗಳನ್ನು ನಾನು ಮತ್ತು ನನ ಸಹೋದರ ಸಹೋದರಿಯರು ವಾರೀಸು ಪ್ರಕಾರ ಅನುಭವಿಸಿಕೊಂಡು ಬಂದಿದ್ದ ಭೂಮಿ ಜಾಸ್ತಿ ಇದೆ, ಅದರೆ ನಮಗೆ ತೀರ್ಪಾದ ಭೂಮಿ ಕಡಿಮೆ ಇದೆ ಎಂದು ಸಾಧನೆ ಮಾಡಿದ್ದೇನೆ ಎಂದರೆ ಸರಿ. ಸದ್ರಿ ರಿಟ್ ಅರ್ಜಿಯನ್ನು ಮತ್ತೊಬ್ಬ ಅರ್ಜಿದಾರರಾದ ಸ್ಟೆಲ್ಲಾ ಡಿಸೋಜರವರ ವಿರುದ್ದ ಎಂದರೆ ಸರಿ. ನನ್ನ ಅರ್ಜಿಯನ್ನು ಹೈಕೋರ್ಟ್‌ನವರು ಭೂ ನ್ಯಾಯ ಮಂಡಳಿಯ ಮುಂದೆ ಅರ್ಜಿ ಹಾಕಿ ಎಂದು ಸೂಚಿಸಿ ಮುಕ್ತಾಯಗೊಳಿಸಿದ್ದಾರೆ ಎಂದರೆ ಸರಿ. ಭೂನ್ಯಾಯ ಮಂಡಳಿಯ ಮುಂದೆ ನಾನು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸ್ಟೆಲ್ಲಾ ಡಿಸೋಜರವರ ಭೂಮಿ ರಸ್ತೆ ಅಗಲೀಕರಣ ಕಾರಣಕ್ಕಾಗಿ ಭೂಸ್ವಾದೀನ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸ್ಟೆಲ್ಲಾ ಡಿ'ಸೋಜರವರ ವಾಸ್ತವ್ಯದ ಬಾಬ್ತು ಅವರು ವಾಸವಿದ್ದ ಮನೆಯೂ ಸಹಾ ಭೂ ಸ್ವಾಧೀನ ಗೊಂಡಿರುತ್ತದೆ. ಭೂ-ಸ್ವಾದೀನಗೊಂಡ ಭೂಮಿಗೆ ಪರಿಹಾರವನ್ನು ನೀಡಬೇಡಿ ಎಂದು ನಾನು ಆಕ್ಷೇಪಣೆಯನ್ನು ಭೂ-ಸ್ವಾದೀನ ಅಧಿಕಾರಿ ನೀಡಿರುತ್ತೇನೆ. ಆ ಕಾರಣದಿಂದ ಅವರಿಗೆ ಸುಮಾರು ಸಮಯಗಳ ನಂತರ ಹಣ ಸಿಕ್ಕಿರುತ್ತದೆ ಎಂದರೆ ಸರಿ. ನಂತರ ನಾನು

ನನ್ನ ಆಕ್ಷೇಪಣೆಯನ್ನು ವಾಪಾಸು ಪಡೆದಿರುತ್ತೇನೆ. ಆಕ್ಷೇಪಣೆಯನ್ನು ವಾಪಾಸು ಪಡೆಯುಯುವಾಗ ಸದ್ರಿ ಭೂಮಿಯ ಬಾಬ್ತು ನಾನು ರೂ.5 ಲಕ್ಷ ಹಣವನು ಪಡೆದಿದ್ದೇನೆ ಎಂದರೆ ಸರಿಯಲ್ಲ.

ನಾನು ಸುಳ್ಳು ಸುಳ್ಳು ದಾಖಲೆ ಮಾಡುವುದು ಮತ್ತು ಆಕ್ಷೇಪಣೆ ಮಾಡವುದು ನನ್ನ ಹವ್ಯಾಸ ಎಂದರೆ ಸರಿಯಲ್ಲ. ಜನರನ್ನು ಬೆದರಿಸಿ ಹಣ ವಸೂಲಿ ಮಾಡುವ ಹವ್ಯಾಸ ಇದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲೂ ಸಹಾ ವಾದಿಗೆ ತೊಂದರೆ ಮಾಡಲು ಸುಳ್ಳು ಸಾಧನೆ ಮಾಡುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ. ಅದೇ ದುರುದ್ದೇಶದಿಂದ ನಿಡಿ.8 ಮತ್ತು ನಿಡಿ.9 ನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ನಿಡಿ.8 ಮತ್ತು ನಿಡಿ.9 ಜಾರಿಗೆ ಬರತಕ್ಕ ದಾಖಲೆ ಅಲ್ಲ ಮತ್ತು ಅದರ ಮೂಲಕ ನನಗಾಗಲೀ ನನ್ನ ಹೆಂಡತಿ, ಮಕ್ಕಳಿಗಾಗಲೀ ಯಾವುದೇ ಆಸ್ತಿಯಲ್ಲಿ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

ಓ. ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ.

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ ಕುಂದಾಪುರ.